# ಹುಲ್ಲು ನಿವಾರಿಸೋ ಹುಲ್ಲುಬಸಪ್ಪ...

ಬೆಳೆಯ ಮಧ್ಯ ಬೆಳೆಯುವ ಕಳೆಯನ್ನು ನಿವಾರಿಸಲು ಹಳ್ಳಿಗಾಡಿನ ರೈತರು ಹಲವಾರು ವಿಧಾನಗಳನ್ನು ಬಳಸುತ್ತಾರೆ. ಅದರಲ್ಲಿ ಎಡೆ ಕುಂಟೆ ಹಾಕುವ, ಕುರ್ಚಿಗೆಯಿಂದ ಕಳೆ ತೆಗೆಯುವ, ಕೈಯಿಂದ ಕಳೆ ಕೀಳುವ ಮೊದಲಾದ ವಿಧಾನಗಳಿವೆ. ಇದರ ಆಚೆಗೂ ದೈವದ ಮೊರೆಯ ಮೂಲಕ ಬೆಳೆಯ ಮಧ್ಯದಲ್ಲಿ ಅನಗತ್ಯವಾಗಿ ಬೆಳೆಯುವ ಕಳೆಯನ್ನು ಅರ್ಥಾತ್ ಹುಲ್ಲನ್ನು ನಿವಾರಿಸುವ ವಿಧಾನವೊಂದಿದೆ. ಅದುವೇ ಈ ಹುಲ್ಲು ಬಸಪ್ಪನ ಆರಾಧನೆ. ಹುಲ್ಲು ಬಸಪ್ಪನ ಗುಡಿ ಇರುವುದು ನಮ್ಮ ಹೊಲದ ಸಮೀಪ. ಈ ಗುಡಿಯಲ್ಲಿರುವ ಬಸಪ್ಪನಿಗೆ ಬಿತ್ತನೆ ಸಮಯದಲ್ಲಿ ಪೂಜೆ ಮಾಡಿ ಸಮೃದ್ಧ ಬೆಳೆ ಕರುಣಿಸುವಂತೆ ಬೇಡುತ್ತಾರೆ. ಹಾಗೆಯೇ ಸಮೃದ್ಧವಾಗಿ ಬೆಳೆದ ಬೆಳೆಯಲ್ಲಿ ಹುಲ್ಲು ಬೆಳೆಯದಂತೆ ಕಾಪಾಡು ಎಂದು ಶ್ರಾವಣ ಮಾಸದಲ್ಲಿ ಸುತ್ತಲ ಹೊಲದವರು ದಾಸೋಹ ನೆರವೇರಿಸುತ್ತಾರೆ. ಹೀಗೆ ರೈತರು ತಮ್ಮ ಬೆಳೆಗಳ ರಕ್ಷಣೆಗೆ ದೈವದ ಮೊರೆಹೋಗುವ ವಿಧಾನ ಈಗಲೂ ಮುಂದುವರೆದಿದೆ.

–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ



# ಬೆರಗು ಹುಟ್ಟಿಸುವ ಗೂಡು ದೀಪ



ಈಚೆಗಷ್ಟೇ ದೀಪಗಳ ಹಬ್ಬ ದೀಪಾವಳಿ ಮುಗಿದಿದೆ. ಹಬ್ಬದಲ್ಲಿ ಹೆಚ್ಚಿನ ಪ್ರಮಾಣದ ಪಟಾಕಿ ಸಿಡಿಸಿ ಮಾಲಿನ್ಯ ಮಾಡಿದ್ದೂ ಆಗಿದೆ. ಪಟಾಕಿ ಬದಲು ದೀಪ ಹಚ್ಚುವುದನ್ನು ರೂಢಿ ಮಾಡಿಕೊಳ್ಳಬೇಕಾದ ಔಚಿತ್ಯವಿದೆ. ಅಂದಹಾಗೆ ದೀಪಾವಳಿಯಲ್ಲಿ ಗೂಡು ದೀಪ ಅಥವಾ ಆಕಾಶ ಬುಟ್ಟಿ ಹಚ್ಚುವುದು ಒಂದು ವಿಶೇಷ ಸಂಪ್ರದಾಯ. ಇದನ್ನು ಮನೆಯ ಮುಂದೆ ಅಥವಾ ಬಾಲ್ಕನಿಯಲ್ಲಿ ನೇತುಹಾಕಲಾಗುತ್ತದೆ. ಇದು ಮನೆಯ ಅಂದ ಹೆಚ್ಚಿಸುವುದರ ಜೊತೆಗೆ ಬೆಳಕಿನ ಹಬ್ಬಕ್ಕೆ ಮೆರುಗು ನೀಡುತ್ತದೆ. ಅದರಲ್ಲೂ ಸ್ಥಳೀಯವಾಗಿ ರೂಪುಗೊಂಡ ಗೂಡು ದೀಪಗಳನ್ನೇ ಹೆಚ್ಚಾಗಿ ಉಪಯೋಗಿಸಿ ಸ್ಥಳೀಯ ಕುಶಲಕರ್ಮಿಗಳ ಅಭಿವೃದ್ಧಿಗೆ ನೆರವಾಗಬೇಕಿದೆ.

ಈ ದಿಶೆಯಲ್ಲಿ ತಮ್ಮ ತಂದೆ ಅವರಿಂದ ಗೂಡು ದೀಪಗಳ ತಯಾರಿಕೆ ಕಲಿತ ಸಾಲಿಗ್ರಾಮದ ನರಹರಿ ಶೆಣೈ ಪ್ರತಿ ವರ್ಷದಂತೆ ಗೂಡು ದೀಪಗಳನ್ನು ತಯಾರಿಸಿ ಮಾರಾಟ ಮಾಡಿದ್ದರು. ಹಬ್ಬದ ಹೊರತಾಗಿಯೂ ಇವುಗಳ ಖರೀದಿ ನಡೆಯುತ್ತಲೇ ಇರುತ್ತದೆ. ಕಾರಣ ಮನೆಯ ಅಂದ ಹೆಚ್ಚಿಸಲು. ಈ ಗೂಡು ದೀಪ ತಯಾರಿಸುವುದು ಒಂದು ಕುಶಲ ಕಲೆ. ಕಲಿಯಲು ಆಸಕ್ತಿ ಇದ್ದ ಯುವಕರಿಗೆ ಉಚಿತವಾಗಿ ಕಲಿಸುವ ನರಹರಿ ಶೆಣೈ, ಸಾಂಸ್ಕೃತಿಕ ಸಂಸ್ಥೆಯ ಕಾರ್ಯಾಗಾರಗಳಲ್ಲಿ ಭಾಗವಸಿದವರಿಗೆ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದಾರೆ. ಮಂಗಳೂರು, ಉಡುಪಿಯ ಕೆಲ ಸಂಘಟನೆಯವರು ಗೂಡು ದೀಪಗಳ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಅವರ ಕಲಿಕೆಯಂತೆ ನಾನು ಗೂಡು ದೀಪಗಳನ್ನು ರಚಿಸಿ ನಮ್ಮ ಮನೆಯ ಅಂದ ಹೆಚ್ಚಿಸಿದ್ದೇನೆ. ಎಲ್ಲರೂ ವರ್ಷವಿಡೀ ಈ ಗೂಡು ದೀಪಗಳನ್ನು ತಮ್ಮ ಮನೆಗಳ ಮುಂದೆ ಬೆಳಗಿಸುವಂತಾಗಲಿ.

–ರಘುನಾಥರಾವ್ ತಾಪ್ಸೆ, ದಾವಣಗೆರೆ

ಮೋಹಕವಾಗಿ ಪ್ರವಹಿಸುವುದನ್ನು ನೋಡುವುದೇ ಒಂದು ಸೋಜಿಗ. ಜಲಪಾತದ ಬುಡದಲ್ಲಿ ಮೂರ್ನಾಲ್ಕೆಡೆಗಳಲ್ಲಿ ಸೃಷ್ಟಿಯಾಗಿರುವ ನೈಸರ್ಗಿಕ ಕೊಳಗಳು ಹೆಚ್ಚು ಆಳವಿಲ್ಲದ ಕಾರಣ ಪ್ರವಾಸಿಗರು ಈಜಾಡಿ ನೀರಾಟವಾಡಬಹುದಾಗಿದೆ. ಆದರೆ ಬಂಡೆಕಲ್ಲುಗಳು ಜಾರುವುದರಿಂದ ಜಲಪಾತಗಳ ಸಮೀಪಕ್ಕೆ ಜಾಗರೂಕತೆಯಿಂದ ಸಾಗಬೇಕಾಗುತ್ತದೆ. ಅಂಕೋಲಾದ ಕೊಡ್ಸಣಿಯಿಂದ ನಾಲ್ಕೈದು ಕಿ.ಮೀ. ದೂರದಲ್ಲಿದ್ದು ಕಚ್ಚಾ ರಸ್ತೆಯಲ್ಲಿ ಚಿಕ್ಕ ವಾಹನಗಳಲ್ಲಿ ಸಾಗಬಹುದಾಗಿದೆ.

ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಜಲಪಾತದ ಸಮೀಪ ಮದ್ಯಮಾಂಸಾಹಾರ ಸೇವನೆ ನಿಷಿದ್ಧ. ಸ್ವಚ್ಛತೆ ಕಾಪಾಡಿ ಪ್ರಕೃತಿ ರಕ್ಷಿಸುವುದು ನಾಗರಿಕ ಪ್ರಜ್ಞೆಯುಳ್ಳ ಪ್ರವಾಸಿಗರ ಮೂಲಭೂತ ಹೊಣೆಯೆಂದು ಈ ಕ್ಷೇತ್ರ ಸಾರುತ್ತದೆ. ಜನಜಂಗುಳಿಯಿಂದ ದೂರ, ನೈಸರ್ಗಿಕ ಶುದ್ಧ ಪ್ರಶಾಂತ ಪರಿಸರದ ಪ್ರಕೃತಿಯ ಮಡಿಲಲ್ಲಿ ಪ್ರವಾಸ ಮಾಡಲು ಬಯಸುವ ಮಂದಿಗೆ ಈ ತಾಣ ಸೂಕ್ತವಾಗಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

